ತೃಪ್ತಿದಾಯಕ ವಿವರ ಸಿಗುವವರೆಗೆ ನೀನು ಬ್ರಿಟಿಷ್ ಕೌನ್ಸಿಲ್‌ನ ಈ ಕಚೇರಿಯಲ್ಲಿರಬೇಕು. ಕಚೇರಿಯಿಂದ ಹೋಗುವುದಕ್ಕೆ ನಿನಗೆ ಅನುಮತಿ ಇಲ್ಲ.'

ಈಗ ಹರಿಲಾಲನಿಗೆ ಸಂಪೂರ್ಣ ಸತ್ಯವನ್ನು ಒಪ್ಪಿಕೊಳ್ಳದೆ ಬೇರೆ ಉಪಾಯವಿರಲಿಲ್ಲ. ಸತ್ಯವನ್ನು ಹೇಳಿದ ನಂತರ ಬಹುಶಃ ಈ ಅಧಿಕಾರಿ ದಯೆತೋರಿ ನನಗೆ ಹೋಗಲು ವ್ಯವಸ್ಥೆ ಮಾಡಬಹುದು...

'ಸಾರ್...ಸಾರ್...ನನ್ನನ್ನು ಕ್ಷಮಿಸಿ. ನೀವು ಹೇಳುತ್ತಿರುವುದು ನಿಜ...ಬ್ಯಾರಿಸ್ಟರ್ ಗಾಂಧಿ ನನ್ನ ತಂದೆಯಾಗಿದ್ದಾರೆ...' ಅವನು ಸತ್ಯವನ್ನು ಒಪ್ಪಿಕೊಂಡ.

ಆಂಗ್ಲ ಅಧಿಕಾರಿ ಗೊಳ್ಳನೆ ನಕ್ಕ. ಅವನು ಎದ್ದು ಬಂದು ಹರಿಲಾಲನ ಬೆನ್ನ ಮೇಲೆ ಗುದ್ದಿದ.

'ಯಂಗ್ ಮ್ಯಾನ್, ನಾನು ನಿನ್ನನ್ನು ಮೊದಲೇ ಗುರುತಿಸಿದ್ದೆ. ನಿನ್ನ ಮುಖ ಬ್ಯಾರಿಸ್ಟರ್ ಗಾಂಧಿಯವರನ್ನು ತುಂಬಾ ಹೋಲುತ್ತದೆ. ಆದರೆ ನಾನೀಗ ನೀನು ಜಾರಿಕೊಳ್ಳಲು ಬಿಡುವುದಿಲ್ಲ. ಬ್ರಿಟಿಷ್ ಕೌನ್ಸಿಲ್‌ನ ಪ್ರಜೆಯಾಗಿ ನಿನಗೆ ಸಹಾಯಬೇಕಿತ್ತು. ನೀನು ಮೊದಲು ಕೌನ್ಸಿಲ್‌ನ ಆತಿಥ್ಯವನ್ನು ಸ್ವೀಕರಿಸಬೇಕಾಗುತ್ತದೆ. ಬ್ಯಾರಿಸ್ಟರ್ ಗಾಂಧಿಯವರ ಒಪ್ಪಿಗೆ ಸಿಗುವವರೆಗೆ ನಿನಗೆ ಹಡಗಿನ ಟಿಕೆಟನ್ನು ಕೊಡಲಾಗುವುದಿಲ್ಲ.'

ಹರಿಲಾಲ ಈಗ ಏನನ್ನೂ ಹೇಳುವ ಸ್ಥಿತಿಯಲ್ಲಿರಲಿಲ್ಲ. ಬ್ರಿಟಿಷ್ ಕೌನ್ಸಿಲ್‌ನ ಆ ಅಧಿಕಾರಿ ಕೂಡಲೇ ಜೋಹಾನ್ಸ್‌ಬರ್ಗ್‌ನಲ್ಲಿದ್ದ ಬಾಪೂ ಅವರಿಗೆ ತಂತಿ ಸಂದೇಶವನ್ನು ಕಳುಹಿಸಿದ. ಈಗ ಹರಿಲಾಲ ಆ ಕಚೇರಿಯಲ್ಲಿ ಸುಮಾರಾಗಿ ಕಣ್ಗಾವಲಿನ ಶಿಕ್ಷೆಯಲ್ಲಿದ್ದ.

ಜೋಹಾನ್ಸ್‌ಬರ್ಗ್‌ಗೆ ತಂತಿ ತಲುಪಿದಾಗ ಬಾಪೂ ಅವರು ಟಾಲ್‌ಸ್ಟಾಯ್ ಫಾರ್ಮ್‌ನಲ್ಲಿದ್ದರು. ದಾವೂದ್ ಸೇಠ್ ಅವರಿಗೆ ಈ ಸಂದೇಶದ ಬಗ್ಗೆ ತಿಳಿದಾಗ ಅವರು ತಕ್ಷಣ ಒಬ್ಬ ಸಂದೇಶವಾಹಕನನ್ನು ಈ ತಂತಿಯೊಂದಿಗೆ ಟಾಲ್‌ಸ್ಟಾಯ್ ಫಾರ್ಮ್‌ಗೆ ಓಡಿಸಿದರು. ಸಂದೇಶವಾಹಕ ಸಂದೇಶವನ್ನು ತರುವುದಕ್ಕೂ ಮೊದಲೇ ಅವರು ಬ್ರಿಟಿಷ್ ಕೌನ್ಸಿಲ್ ಕಚೇರಿಗೆ ಮರು ತಂತಿ ಕಳುಹಿಸಿ, ಹರಿಲಾಲನನ್ನು ತಡೆಯಬೇಕೆಂದು ಆಗ್ರಹಿಸಿದ್ದರು. ಬ್ರಿಟಿಷ್ ಕೌನ್ಸಿಲ್ ಕಛೇರಿಯ ತಂತಿ ಟಾಲ್‌ಸ್ಟಾಯ್ ಫಾರ್ಮ್ ತಲುಪಿದಾಗ, ಬಾಪೂ ಆಶ್ರಮವಾಸಿಗಳನ್ನು ಸೇರಿಸಿ ಭಜನೆಯನ್ನು ಮಾಡುತ್ತಿದ್ದರು. ಅಷ್ಟರಲ್ಲಿ ಬಾ ಅವರು ಸಹ ಫೀನಿಕ್ಸ್ ಆಶ್ರಮದಿಂದ ಅಲ್ಲಿಗೆ ಬಂದಿದ್ದರು. ಬಾಪೂ ಅವರು ಬಾ ಅವರಿಗೆ ಹರಿಲಾಲನ ಬಗ್ಗೆ ಹೇಳಿದ ಸುದ್ದಿಯನ್ನು ಕೇಳಿ ಅವರು ಒಮ್ಮೆಲೆ ಆಘಾತಗೊಂಡಿದ್ದರು. ಹರಿಲಾಲ ಬಾಪೂ ಅವರಿಗೆ ಪತ್ರದಲ್ಲಿ ಬರೆದ ವಿಷಯ ತಿಳಿದು ಅವರ ಹೃದಯ ಮೂಕವೇದನೆಯಲ್ಲಿ ಚಡಪಡಿಸಿತ್ತು. ಹರಿಲಾಲ ಹಿಂದೂಸ್ತಾನಕ್ಕೂ ಹೋಗಿರದಿದ್ದರೆ ಎಂಬ ಯೋಚನೆ ಪದೇಪದೇ ದಾಳಿ ಮಾಡುತ್ತಿತ್ತು.

ಬಾ ಅವರು ಹೀಗೆ ಯೋಚಿಸಿ ಯೋಚಿಸಿ ಕಂಪಿಸುತ್ತಿದ್ದರು, ಕಣ್ಣುಗಳು ತುಂಬಿ ಬರುತ್ತಿದ್ದವು. ಬಾಪೂ ಅವರ ಉಪಸ್ಥಿತಿಯಲ್ಲಿ ಆಶ್ರಮದ ನಿತ್ಯದ ಕಾರ್ಯಕಲಾಪಗಳು ಮೇಲುನೋಟಕ್ಕೆ ಈ ಮೊದಲಿನಂತೆಯೇ ನಡೆಯುತ್ತಿದ್ದವು; ಆದರೆ ಎಲ್ಲರ ಮನಸ್ಸಿನಲ್ಲಿ ಅದೃಶ್ಯ ಭಯವೊಂದು ಮನೆ ಮಾಡಿತ್ತು.

'ನೀವು...ಇದೇನು...ನೀವು...' ಬಾ ಪದೇಪದೇ ಬಾಪೂ ಅವರನ್ನು ಕೇಳುತ್ತಿದ್ದರು, 'ನಾನು ಚಂಚಿಗೆ ನನ್ನ ಮುಖವನ್ನು ಹೇಗೆ ತೋರಿಸಲಿ?'

ಬಾಪೂ ಅವರು ತಂತಿಸಂದೇಶವನ್ನು ಓದಿ ಬಾ ಅವರನ್ನು ನೋಡಿದರು. ಬಾ ಅವರ ಮುಖ ಬಿಳುಪಾಗಿತ್ತು.

'ನಿನ್ನಿಚ್ಛೆ ಈಡೇರುವಂಥ ಸುದ್ದಿಯಿದೆ,' ಬಾಪೂ ಮೆಲ್ಲನೆ ಹೇಳಿದರು, 'ಹರಿಲಾಲ ಸಿಕ್ಕಿದ್ದಾನೆ. ಅವನನ್ನು ಬ್ರಿಟಿಷ್ ಕೌನ್ಸಿಲ್ ಅವರ ಕಚೇರಿಯಲ್ಲಿ ತಡೆ ಹಿಡಿದಿದ್ದಾರೆ. ಅವರು ನನಗೆ ಅಲ್ಲಿಗೆ ಬರುವಂತೆ ತಿಳಿಸಿದ್ದಾರೆ.'

'ಹೇ ಪ್ರಭು!' ಬಾ ಮನಬಿಚ್ಚಿ ರೋದಿಸಿದರು, 'ನೀನು ನನ್ನ ಪ್ರಾರ್ಥನೆಯನ್ನು ಕೇಳಿದೆ, ನನ್ನ ಮರ್ಯಾದೆಯನ್ನು ಉಳಿಸಿದೆ, ಪ್ರಭು. ನೀನೇ ನನ್ನ ಹರಿಲಾಲನನ್ನು ಕಾಪಾಡು, ದೀನಾನಾಥಾ!'

ಈಗ್ಗೆ ಕೆಲವು ಕ್ಷಣಕ್ಕೆ ಮೊದಲು ವ್ಯಾಪಿಸಿದ್ದ ಚಿಂತೆ ಮತ್ತು ದುಃಖದ ವಾತಾವರಣ, ಒಮ್ಮೆಲೆ ತಿಳಿಯಾಯಿತು.

ಬಾಪೂ ಅವರು ಅದೇ ಸಂದೇಶವಾಹಕನ ಕೈಯಲ್ಲಿ ಡರಬನ್‌ನ ಬ್ರಿಟಿಷ್ ಕೌನ್ಸಿಲ್ ಕಚೇರಿಗೆ ಮತ್ತೊಂದು ತಂತಿಯನ್ನು ಕಳುಹಿಸಿ, ನಂತರ ತಾವೇ ಖುದ್ದು ಡರಬನ್‌ಗೆ ಹೊರಟರು.

'ಹರಿಲಾಲನನ್ನು ಕರೆದುಕೊಂಡು ಬರಲೇ ಬೇಕು...ನಾನು ಅವನ ಮುಖವನ್ನು ನೋಡುವವರೆಗೆ ಅನ್ನನೀರು ಸೇವಿಸುವುದಿಲ್ಲವೆಂದು ಹರಿಗೆ ಹೇಳಿ.' ಬಾ ಅವರು ಹೊರಡಲು ಅನುವಾದ ಬಾಪೂ ಅವರಿಗೆ ಎಚ್ಚರಿಕೆಯ ಮಾತನ್ನು ತಿಳಿಸಿದರು.

ಬಾಪೂ ಅವರು ಬಾ ಅವರ ಹೆಗಲ ಮೇಲೆ ಕೈಯಿಟ್ಟರು.

'ನೀನೇನೂ ಯೋಚಿಸಬೇಡ,' ಬಾ ಅವರಿಗೆ ಬಾಪೂ ಸಮಾಧಾನದ ಮಾತುಗಳನ್ನು ಹೇಳಿದರು, 'ದೇವರನ್ನು ನಂಬು. ಅವನಿಚ್ಛೆ ಇದ್ದರೆ ಹರಿಲಾಲನನ್ನು ನಿನ್ನಿಂದ ಯಾರೂ ಕಸಿದುಕೊಂಡು ಹೋಗಲಾರರು. ಆದರೆ ಅವನು ಬೇರೆಯದನ್ನೇ ನಿರ್ಧರಿಸಿದ್ದರೆ, ಅವನಿಚ್ಛೆಯ ಎದುರು ಸಂತೋಷದಿಂದ ತಲೆಬಾಗುವುದೇ ಲೇಸು.' ಎಂದು ಬಾಪೂ ಎದ್ದು ನಿಂತರು.

'ಮತ್ತೆ ನೋಡು, ಡರಬನ್‌ನಿಂದ ಹರಿಲಾಲನನ್ನು ಕರೆದುಕೊಂಡು ಎರಡುಮೂರು ದಿನಗಳಲ್ಲಿ ಜೋಹಾನ್ಸ್‌ಬರ್ಗ್‌ಗೆ ಬರುತ್ತೇನೆ. ಈ ನಡುವೆ ನೀನೂ ಸಹ ಜೋಹಾನ್ಸ್‌ಬರ್ಗ್‌ಗೆ ಬಂದಿರು.'

'ಆಗಲಿ...' ಬಾ ಅವರು ತಲೆಯಾಡಿಸಿ ಒಪ್ಪಿಗೆಯನ್ನು ಸೂಚಿಸಿದರು, 'ನನಗೆ ದೇವರ ಬಗ್ಗೆ ತುಂಬಾ ನಂಬಿಕೆಯಿದೆ... ಆದರೆ ನನಗೆ ಹರಿಲಾಲನಿಲ್ಲದೆ ಮನಸ್ಸಿಗೆ ನೆಮ್ಮದಿ ಇರುವುದಿಲ್ಲ..' ಎನ್ನುವಾಗ ಅವರ ಕಂಠ ಒತ್ತಿ ಬಂತು. ಬಾಲಕ ದೇವದಾಸ ಬಾ ಅವರ ಸೆರಗನ್ನು ಹಿಡಿದು ದೈನ್ಯ ಭಾವನೆಯಿಂದ ಬಾಪೂ ಅವರನ್ನು ನೋಡುತ್ತಿದ್ದ. ಬಾಪೂ ಅವನ ಗಲ್ಲವನ್ನು ಪ್ರೀತಿಯಿಂದ ಸವರಿ ನಂತರ ಬೆನ್ನು ಮಾಡಿ ಹೊರಗೆ ಹೋದರು.

ಹದಿನೈದು

ಡರಬನ್‌ನ ಬ್ರಿಟಿಷ್ ಕೌನ್ಸಿಲ್‌ನ ಕಚೇರಿಯಲ್ಲಿ ಬ್ಯಾರಿಸ್ಟರ್ ಗಾಂಧಿ ತಮ್ಮ ಮಗನನ್ನು ಭೇಟಿಯಾದರು. ಆಗ ಅವನು ಭಾವಶೂನ್ಯನಾಗಿ ನಿಂತಿದ್ದ. ತಂದೆಯನ್ನು ನೋಡಿದೊಡನೆಯೇ ಅವನು ತಲೆಬಾಗಿ ನಮಸ್ಕರಿಸಿದ. ಬಾಪು ಕಂಪಿಸುವ ಕೈಯಿಂದ ಆಶೀರ್ವದಿಸಿದರು. ತಂದೆಯವರ ಮುಖದಲ್ಲಿ ಅಪಾರವಾದ ದುಃಖವಿರುವುದನ್ನು ಹರಿಲಾಲ ಗಮನಿಸಿದ.

'ಹರಿ...ಹರಿ...ನಿನಗೆ ಇದು ಹೇಗೆ ಹೊಳೆಯಿತು,' ಬಾಪೂ ಅವರ ತುಟಿಗಳು ಕಂಪಿಸಿದವು, 'ಹರಿ, ನೀನೇಕೆ ಇಂಥ ಹೆಜ್ಜೆಯನ್ನಿಟ್ಟೆ?' ಹರಿಲಾಲ ಉತ್ತರಿಸಲಿಲ್ಲ.

'ನಿನ್ನ ಮನಸ್ಸಿನಲ್ಲಿ ತಂದೆಯ ಅಪರಾಧ ನೆಲೆಸಿದೆ, ಆದರೆ ಅದಕ್ಕಾಗಿ ಪಾರಿವಾಳದಂಥ ನಿನ್ನ ಮುಗ್ಧ ತಾಯಿಯ ಬಗ್ಗೆ ನೀನೇಕೆ ಯೋಚಿಸಲಿಲ್ಲ? ಅವಳು ಇಂದು ನರಳುತ್ತಿರುವುದನ್ನು, ನೀನೇ ಖುದ್ದು ಅವಳ ಬಳಿಗೆ ಹೋದಾಗ ನೋಡುವೆ.'

ಹರಿಲಾಲ ಈಗಲೂ ಮಾತನಾಡಲಿಲ್ಲ; ಅವನು ಬಾಪೂ ಅವರ ಯಾವುದೇ ಮಾತನ್ನು ಕೇಳಿಯೇ ಇಲ್ಲವೆಂಬಂತೆ ವರ್ತಿಸಿದ. ಬಾಪೂ ಸಹ ಮೌನವನ್ನು ತಾಳಿದರು. ನಂತರ ಅವರು ಹರಿಲಾಲನ ಮುಖವನ್ನು ನೇವರಿಸುತ್ತಾ, ಇಷ್ಟನ್ನೇ ಹೇಳಿದರು, 'ದೇವರನ್ನು ನಂಬು, ಹರಿ! ಅವನು ಬಯಸಿದ್ದು ಖಂಡಿತ ನೆರವೇರುವುದು. ಇನ್ನು ಹೊರಡು, ಬೇಗನೇ ಜೋಹಾನ್ಸ್‌ಬರ್ಗ್‌ಗೆ ಹೋಗೋಣ, ಅಲ್ಲಿ ನಿನ್ನ ತಾಯಿ ಅನ್ನನೀರು ತ್ಯಜಿಸಿ ನಿನ್ನ ದಾರಿಯನ್ನೇ ನೋಡುತ್ತಿದ್ದಾಳೆ.'

ಬಾಪೂ ಅವರ ಈ ಕೊನೆಯ ಮಾತಿಗೂ ಹರಿಲಾಲ ಯಾವುದೇ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲಿಲ್ಲ. ಜೋಹಾನ್ಸ್‌ಬರ್ಗ್‌ಗೆ ಹೋಗಲು ಅವನು ಬಟ್ಟೆಯನ್ನು ಬದಲಿಸಿದ. ನಂತರ ಬಾಪೂ ಅವರೊಂದಿಗೆ ಬಂದು ಆ ಆಂಗ್ಲ ಅಧಿಕಾರಿಯ ಕೈಯನ್ನು ಕುಲುಕಿದ. ನಂತರ ಇಬ್ಬರೂ ಡರಬನ್ ರೈಲ್ವೆ ಸ್ಟೇಷನ್‌ಗೆ ಹೊರಟರು. ಮಾರ್ಗದುದ್ದಕ್ಕೂ ಬಾಪೂ ಅವರು ಹರಿಲಾಲನನ್ನೇ ಗಮನಿಸುತ್ತಿದ್ದರು. ಹರಿಲಾಲನ ಕಣ್ಣುಗಳು ನಕಲಿ ನಾಣ್ಯದಂತೆ ಮರಳಿ ಬಂದ ಆ ಟಿನ್‌ನ ಪೆಟ್ಟಿಗೆಯನ್ನು ನೋಡುತ್ತಿದ್ದವು. ಈ ಟಿನ್ ಪೆಟ್ಟಿಗೆ ಎರಡನೆಯ ಬಾರಿಗೆ ಡರಬನ್‌ನಿಂದ ಜೋಹಾನ್ಸ್‌ಬರ್ಗ್‌ಗೆ ಪ್ರಯಾಣವನ್ನು ಮಾಡುತ್ತಿತ್ತು. ಮೊದಲು ಪರಾಗರು ಅವನೊಂದಿಗಿದ್ದರು, ಆಗ ಈ ಪೆಟ್ಟಿಗೆಯಲ್ಲಿ ಅನೇಕ ವಸ್ತುಗಳಿದ್ದವು...ಎರಡನೆಯ ಬಾರಿಯೂ ಇದರಲ್ಲಿ ಅನೇಕ ವಸ್ತುಗಳಿದ್ದವು, ಆದರೆ ಈ ವಸ್ತುಗಳು...

ಹರಿಲಾಲನ ಕಣ್ಣುಗಳು ಕಲ್ಲಿನಂತೆ ಸ್ಥಿರವಾಗಿದ್ದವು. ಅವನ ಮುಖ ಭಾವಶೂನ್ಯವಾಗಿತ್ತು. ಪಶ್ಚಾತ್ತಾಪ ಅಥವಾ ರೋಷದ ಭಾವನೆ ಮರೆತೂ ಸಹ ಅವನ ಮುಖದಲ್ಲಿರಲಿಲ್ಲ.

ತಂದೆಮಗ ಮನೆಯನ್ನು ತಲುಪುವವರೆಗೆ